# “ಆನಂದಕಂದ ಪ್ರಶಸ್ತಿ–೨೦೧೯”
## ಪ್ರದಾನ ಸಮಾರಂಭ



ಧಾರವಾಡ : ಬೆಟಗೇರಿ ಕೃಷ್ಣಶರ್ಮ ಅವರು ಕವಿಭೂಷಣ, ಆನಂದಕಂದರಾಗಿ ಬೆಳದವರು. ಕನ್ನಡ ಮತ್ತು ಮರಾಠಿ ಭಾಷೆಯನ್ನು ಅವಿನಾಭಾವದಿಂದ ಬೆಳೆಸುವ ನಿಟ್ಟಿನಲ್ಲಿ ಡಾ. ಪಂಡಿತ ಅವಳೀಕರ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿಗೈದ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ, ಕನ್ನಡ ಸಾಹಿತಿಗಳಲ್ಲಿ ಬೆಟಗೇರಿಯವರದು ಸಿಂಹಪಾಲು ಇದೆ. ಈ ನಿಟ್ಟಿನಲ್ಲಿ ಬೆಟಗೇರಿ ಕೃಷ್ಣಶರ್ಮ ಅವರ ಸಾಹಿತ್ಯದ ಪ್ರಕಾರಗಳನ್ನು ಯುವಜನತೆಗೆ ತಿಳಿಸುವ ದಿಸೆಯಲ್ಲಿ ದತ್ತಿ ಇಟ್ಟಿರುವುದು ಸಂತೋಷದ ಸಂಗತಿ. ಆದರೆ ಕನ್ನಡವನ್ನು ಮುಂಬಯಿ ವಿಶ್ವವಿದ್ಯಾಲಯದಲ್ಲಿದ್ದು ಹೆಚ್ಚು ಶ್ರೀಮಂತಗೊಳಿಸುತ್ತಿದ್ದಾರೆ. ಆದರೆ ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳು ಏಕೆ ಮಾಡುತ್ತಿಲ್ಲ ಎನ್ನುವುದು ಬೇಸರದ ಸಂಗತಿ ಎಂದು ಹಿರಿಯ ಸಾಹಿತಿ, ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಜಿ. ಎಂ. ಹೆಗಡೆ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಮತ್ತು ಮರಾಠಿ ಭಾಷಾ ಬಾಂಧವ್ಯ ಬಲಪಡಿಸಲೆಂದು ಡಾ. ಪಂಡಿತ ಅವಳೀಕರ ಅವರು ಕೊಡಮಾಡಿದ ದತ್ತಿ ಅಂಗವಾಗಿ ಲೇಖಕಿ ನವಿ ಮುಂಬಯಿ ಡಾ. ಮೇಧಾ ಕುಲಕರ್ಣಿ ಅವರಿಗೆ “ಆನಂದಕಂದ ಪ್ರಶಸ್ತಿ–೨೦೧೯” ಪ್ರದಾನ ಮಾಡಿ ಮಾತನಾಡುತ್ತಿದ್ದರು.

ಮರಾಠಿ ಭಾಷೆಯು ಕರ್ನಾಟಕದಲ್ಲಿ ಹೇಗೆ ಪ್ರಭಾವ ಬೀರಿದೆಯೋ ಹಾಗೆಯೇ ಮಹಾರಾಷ್ಟ್ರದಲ್ಲಿ ಕನ್ನಡದ ಕಂಪನ್ನು ಪಸರಿಸುವ ಕೆಲಸ ಆಗಬೇಕಾಗಿದೆ. ಅದರಲ್ಲೂ ಕನ್ನಡ ಸಂಸ್ಕೃತಿಯನ್ನು ಮುಂಬಯಿಯಲ್ಲಿ ಅಧ್ಯಯನ ಮಾಡುವ ಕೆಲಸ ಮಾಡಬೇಕು ಅಂತಹ ಕೆಲಸವನ್ನು ಡಾ. ಮೇಧಾ ಕುಲಕರ್ಣಿಯವರು ಮಾಡಿದ್ದಾರೆ. ಅದರಲ್ಲೂ ಕರ್ನಾಟಕ ಮತ್ತು ಮಹಾರಾಷ್ಟ್ರದ ದೇವಾನುದೇವತೆಗಳ ತೌಲನಿಕ ಅಧ್ಯಯನದಿಂದ ಕನ್ನಡ ಮತ್ತು ಮರಾಠಿ ಜನತೆಯಲ್ಲಿ ಮೂಲ ಸಂಸ್ಕೃತಿಗಳ ಬಾಂಧವ್ಯತೆಯನ್ನು ಕಟ್ಟಿಕೊಟ್ಟಿದ್ದಾರೆ. ಈ ಸಂಸ್ಕೃತಿಗಳ ವಿನಿಮಯದಿಂದ ಬದುಕಿನಲ್ಲಿ ಸಾಮರಸ್ಯ ಬೆಳೆದು ಎಲ್ಲರಲ್ಲೂ ಸಹ ಶಾಂತಿ, ನೆಮ್ಮದಿ ಮೂಡಲು ಸಹಾಯಕ. ಈ ಶಾಂತಿಯತೆಯನ್ನು ಮೂಡಿಸಲು ಕರ್ನಾಟಕ ವಿದ್ಯಾವರ್ಧಕ ಸಂಘವು ಮಾಡುತ್ತಿರುವ ಕಾರ್ಯ ಹೆಮ್ಮೆಯ ಸಂಗತಿ ಎಂದು ಹೇಳಿದರು.

‘ಅನಂದಕಂದ ಪ್ರಶಸ್ತಿ’ ಸ್ವೀಕರಿಸಿದ ನವಿ ಮುಂಬಯಿ ಲೇಖಕಿ ಡಾ. ಮೇಧಾ ಕುಲಕರ್ಣಿ ಮಾತನಾಡಿ, ಮುಂಬಯಿಯಲ್ಲಿ ಮರಾಠಿ ಭಾಷೆಯಿಂದ ಆದ ಅನುಭವಗಳನ್ನು ಹಂಚಿಕೊಳ್ಳುತ್ತಾ, ಅಲ್ಲಿಯ ಸಂಸ್ಕೃತಿಯು ಕನ್ನಡ ಸಂಸ್ಕೃತಿಯ ಪ್ರಭಾವದಿಂದ ಒಳಗಾಗಿದೆ. ಅದನ್ನು ನಾವು ಸ್ವೀಕರಿಸಿ ಸಂಸ್ಕೃತಿಯನ್ನು ಶ್ರೀಮಂತಗೊಳಿಸಬೇಕು ಎಂದು ಹೇಳಿದರು. ಧಾರವಾಡದ ಮೂಲ ಜಾನಪದ ಪ್ರಭಾವ ಮರಾಠಿಯಲ್ಲಿ ಸಾಕಷ್ಟಿದೆ. ಅದರಂತೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಕೊಡುಕೊಳ್ಳುವಿಕೆ ಇದ್ದರೆ ಸಾಹಿತ್ಯ ಶ್ರೀಮಂತಗೊಳ್ಳುತ್ತದೆ. ಅಂತಹ ಕೆಲಸವನ್ನು ಮಾಡಲು ನನ್ನನ್ನು ಪ್ರೋತ್ಸಾಹಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ನಾನು ಅಭಾರಿಯಾಗಿದ್ದೇನೆ. ಕನ್ನಡ ಸಾಹಿತ್ಯ ಪ್ರಕಾರಗಳು ಮರಾಠಿ ಭಾಷೆಗೆ ಹೆಚ್ಚು ಹೆಚ್ಚು ಭಾಷಾಂತರಗೊಂಡು ಕನ್ನಡ ಸಾಹಿತ್ಯ ಹೆಚ್ಚು ಬೆಳೆಯುವಂತಹ ಕಾರ್ಯ ಹೆಚ್ಚೆಚ್ಚು ನಡೆಯಲೆಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶಾಂತೇಶ ಗಾಮನಗಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾಷಾ ಬಾಂಧವ್ಯವನ್ನು ಬೆಸೆಯುವುದರಿಂದ ಬದುಕಿನಲ್ಲಿ ಶಾಂತಿಮೂಡಿ ನೆಮ್ಮದಿಯ ಬದುಕು ಸಾಗಿಸಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಂಡಿತ ಅವಳೀಕರ ಅವರು ‘ಆನಂದಕಂದ’ ಹೆಸರಿನಲ್ಲಿ ಪ್ರಶಸ್ತಿ ನೀಡುವುದರ ಜೊತೆಗೆ ಕನ್ನಡ ಮತ್ತು ಮರಾಠಿ ಭಾಷೆಯ ಬಾಂಧವ್ಯತೆ ಬೆಸೆಯಲು ಕ.ವಿ.ವ. ಸಂಘದಲ್ಲಿ ದತ್ತಿ ಇಟ್ಟಿರುವುದು ಹೆಮ್ಮೆಯ ಸಂಗತಿ ಎಂದರು.

ಸಮಾರಂಭದಲ್ಲಿ ಡಾ. ಬೆಟಗೇರಿ ಕೃಷ್ಣಶರ್ಮ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಹಾಗೂ ಬೆಟಗೇರಿ ಕೃಷ್ಣಶರ್ಮ ಅವರ ಮೊಮ್ಮಗ ಶ್ರೀನಾಥ ಬೆಟಗೇರಿ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕ್ರಮದ ಸಂಯೋಜಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಚೈತ್ರಾ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಅವರು ಗಣ್ಯರಿಗೆ ಪುಸ್ತಕ ಮತ್ತು ಪುಷ್ಪ ಅರ್ಪಿಸಿ ವಂದಿಸಿದರು. ಮಾರ್ತಾಂಡಪ್ಪ ಎಮ್. ಕತ್ತಿ ನಿರೂಪಿಸಿದರು.

ನಂತರ ಅನಿಲ ಮೇತ್ರಿ ಹಾಗೂ ತಂಡದವರು ಸೊಗಸಾಗಿ 'ಅನಂದಕಂದ'ರ ಗೀತಗಾಯನ ನಡೆಸಿಕೊಟ್ಟರು. ಇವರಿಗೆ ಕುಮಾರಿ ಮಹಾನಂದಾ ಗೋಸಾವಿ, ಹೇಮಂತಕುಮಾರ ಲಮಾಣಿ ಗಾಯನದಲ್ಲಿ ಹಾಗೂ ಪರಶುರಾಮ ಕಟ್ಟಿಸಂಗಾವಿ ಹಾರ್ಮೋನಿಯಂ ಮತ್ತು ಅನಿಲ ಮೇತ್ರಿ ತಬಲಾ ಸಾಥ್ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಮನೋಜ ಪಾಟೀಲ, ಮನೋಹರ ಕುಲಕರ್ಣಿ, ರಮಾ ಪಂತರ, ಶ್ರೀನಾಥ ಬೆಟಗೇರಿ, ಪ್ರೇಮಾನಂದ ಶಿಂಧೆ, ಶಿವಕುಮಾರ ತೊರಗಲ್ಲಮಠ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

**ಚೈತ್ರಾ ಮೋಹನ ನಾಗಮ್ಮನವರ**
ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ
ಏಪ್ರಿಲ್ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರು
ಮೊ : ೯೭೩೯೫-೯೧೧೩೭